**ಪಾಠ-4** **ಏಪ್ರಿಲ್ 17-23**

# ಒಂದು ಶಾಶ್ವತ ಒಡಂಬಡಿಕೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ವಿ.ಕಾಂಡ 3:14, ಆ.ಕಾಂಡ 17:1-6, ಆ.ಕಾಂಡ 41:45, ದಾನಿ 1:7, ಆ.ಕಾಂಡ 15:7-18, ಆ.ಕಾಂಡ 17:1-14, ಪ್ರಕ 14:6,7.

**ಸ್ಮರಣವಾಕ್ಯ : "ನಿನಗೂ ನಿನ್ನ ಸಂತತಿಗೂ ದೇವರಾಗಿರುವನೆಂದು ನಾನು ನಿನಗೋಸ್ಕರವು ನಿನ್ನ ಸಂತತಿಯ ಎಲ್ಲಾ ತಲಾಂತರಗಳಿಗೋಸ್ಕರವೂ ಮಾಡಿಕೊಂಡ ಒಡಂಬಡಿಕೆಯನ್ನು ಸ್ಥಿರಪಡಿಸುವೆನು"** (ಆ.ಕಾಂಡ 17:7).

ನಾವು ಚಿಕ್ಕಮಕ್ಕಳಾಗಿದ್ದಾಗ ನಮಗೆ ಜ್ವರ, ಶೀತ, ಕೆಮ್ಮು ಅಥವಾ ಅದಕ್ಕಿಂತಲೂ ಕೆಟ್ಟದಾದ ಅಸ್ವಸ್ಥತೆಯಿಂದ ನರಳಿದ ಸಂದರ್ಭಗಳು ನಮ್ಮ ನೆನಪಿನಲ್ಲಿ ಸ್ಪಷ್ಟವಾಗಿ ಉಳಿದುಕೊಂಡಿವೆ ರಾತ್ರಿಯೆಲ್ಲಾ ಜ್ವರದಿಂದ ನರಳುತ್ತಾ ಅರೆಬರೆ ನಿದ್ರೆಯಿಂದ ಎಚ್ಚರವಾದಾಗ ನಮ್ಮ ತಾಯಿ ಅಥವಾ ತಂದೆ ನಮ್ಮ ಪಕ್ಕದಲ್ಲಿ ಉರಿವ ದೀಪದ ಬೆಳಕಿನಲ್ಲಿ ಕುಳಿತಿರುತಿದ್ದು ನಮಗೆ ಗೊತ್ತಿದೆ.

ಅದೇ ರೀತಿ ಮನುಷ್ಯರಿಗೆ ಅರ್ಥವಾಗುವ ಅಲಂಕಾರಿಕ ಭಾಷೆಯಲ್ಲಿ ಹೇಳುವುದಾದರೆ ಜಲಪ್ರಳಯದ ನಂತರ ಶತಶತಮಾನಗಳಿಂದ ಪಾಪದ ಅಂಧಕಾರದಲ್ಲಿ ಮುಳುಗಿ ಅಸ್ವಸ್ಥತೆಗೊಂಡ ಭೂಮಿಯ ಪಕ್ಕದಲ್ಲಿ ದೇವರು ಕುಳಿತಿದ್ದಾನೆ. ಆ ಕಾರಣದಿಂದಲೇ ದೇವರು ತನ್ನ ಮತ್ತು ತಾನು ಕೊಡುವ

---

* ಈ ಪಾಠವನ್ನು ಏಪ್ರಿಲ್ 24ರ ಸಬ್ಬತ್ತಿಗೆ ಸಿದ್ಧಪಡಿಸಲಾಗಿದೆ.

ರಕ್ಷಣೆಯ ಜ್ಞಾನವನ್ನು ಒಪ್ಪಿಸಿಕೊಡಬಹುದಾದ ಜನಾಂಗವನ್ನು ಭೂಮಿಯ ಮೇಲೆ ಸ್ಥಾಪಿಸುವುದಕ್ಕೋಸ್ಕರ ನಂಬಿಗಸ್ತನಾದ ಅಬ್ರಾಮನನ್ನು ಕರೆದನು.

ಆದುದರಿಂದ ದೇವರು ಮನುಷ್ಯಜಾತಿಯನ್ನು ಪಾಪದ ಪರಿಣಾಮದಿಂದ (ಫಲಿತಾಂಶದಿಂದ) ರಕ್ಷಿಸುವ ದೈವೀಕ ಯೋಜನೆಯನ್ನು ವಿವರಿಸಲು ಹೆಚ್ಚು ಒತ್ತುಕೊಡುವ ಒಡಂಬಡಿಕೆಗೆ ಪ್ರವೇಶಿಸಿದನು. ದೇವರು ಇಂತಹ ತೀವ್ರವಾದ ಅಗತ್ಯತೆಯಲ್ಲಿ ಬಿದ್ದಿರುವ ಈ ಲೋಕವನ್ನು ಪರಾಬರಿಸದೆ ಬಿಟ್ಟುಬಿಡುವುದಿಲ್ಲ.

ಈ ವಾರದಲ್ಲಿ ನಮ್ಮ ಗಮನವನ್ನು ಹೆಚ್ಚು ಹೆಚ್ಚಾಗಿ ತೆರೆದುಕೊಳ್ಳುತ್ತಾ ಹೋಗುವ ಒಡಂಬಡಿಕೆಯ ವಾಗ್ದಾನಗಳ ಕಡೆಗೆ ಹರಿಸುವವರಾಗಿದ್ದೇವೆ.

ಈ ವಾರದಲ್ಲಿ ಕಲಿಯುವ ಪಾಠದ ಪಕ್ಷಿನೋಟ : ದೇವರ ಹೆಸರೇನು? ಆತನ ಹೆಸರಿಗೆ ಅರ್ಥವೇನು? ಅಬ್ರಾಮ ತನ್ನನ್ನು ಗುರಿತಿಸುವಂತೆ ದೇವರು ಉಪಯೋಗಿಸಿದ ಹೆಸರುಗಳ ಮಹತ್ವವೇನು?

ಯಾವ ಹೆಸರಿನಿಂದ ದೇವರು ತನ್ನನ್ನು ತಾನು ಗುರುತಿಸಿಕೊಂಡನು? ಯಾಕೆ ದೇವರು ಅಬ್ರಾಹ್ಮನ ಹೆಸರನ್ನು ಅಬ್ರಹಾಮ ಎಂಬುದಾಗಿ ಬದಲಿಸಿದನು? ಯಾವ ನಿಬಂಧನೆಗಳನ್ನು ಮತ್ತು ಕರ್ತವ್ಯಗಳನ್ನು ಒಡಂಬಡಿಕೆಗೆ ಸೇರಿಸಲಾಯ್ತು?

**ಭಾನುವಾರ** **ಏಪ್ರಿಲ್ 18**

## ಯಹ್ವೇ ಮತ್ತು ಅಬ್ರಹಾಮನ ಒಡಂಬಡಿಕೆ

"ಈ ದೇಶದ ಬಾಧ್ಯತೆಯನ್ನು ನಿನಗೆ ಕೊಡುವುದಕ್ಕೋಸ್ಕರ ನಿನ್ನನ್ನು "ಊರ್" ಎಂಬ ಕಲ್ದೀಯರ ಪಟ್ಟಣದಿಂದ ಬರಮಾಡಿದ ಯೆಹೋವನೆ ನಾನು" (ಆ.ಕಾಂಡ 15:7).

ಹೆಸರುಗಳು ಒಮ್ಮೊಮ್ಮೆ ವ್ಯಾಪಾರ ಚಿಹ್ನೆಗಳಿದ್ದಂತೆ (Trademark). ನಮ್ಮ ಮನಸ್ಸಿನಲ್ಲಿ ಕೆಲವು ಗುಣಸ್ವಭಾವಗಳ ಜೊತೆ ಬಹಳ ನಿಕಟವಾದ ಸಂಬಂಧವನ್ನು ಹೊಂದಿರುತ್ತವೆ. ಅವುಗಳ ಹೆಸರನ್ನು ಕೇಳಿದ ಕೂಡಲೇ ಆ ಗುಣಸ್ವಭಾವಗಳನ್ನು ನೆನಪಿಸಿಕೊಳ್ಳುತ್ತೇವೆ. ಉದಾಹರಣೆಗೆ ಈ ಕೆಳಗೆ ಕೊಟ್ಟಿರುವ ಹೆಸರುಗಳ ಬಗ್ಗೆ ಆಲೋಚಿಸುವಾಗ ನಿಮ್ಮ ಮನಸ್ಸಿಗೆ ಯಾವ ಗುಣಲಕ್ಷಣಗಳು ನಿಮ್ಮ ನೆನಪಿಗೆ

ತರುತ್ತವೆ; ಆಲ್ಬರ್ಟ್‌ಐನ್‌ಸ್ಟೇನ್, ಮಾರ್ಟಿನ್‌ಲೂಥರ್‌ಕಿಂಗ್, ಗಾಂಧಿ ಅಥವಾ ದೊರ್ಕಳು? ಇಲ್ಲಿರುವ ಪ್ರತಿಯೊಂದು ಹೆಸರು ಕೆಲವು ಗುಣಸ್ವಭಾವಗಳ ಜೊತೆ ಮತ್ತು ಆದರ್ಶಗಳ ಜೊತೆಗೆ ಬೆಸೆದುಕೊಂಡಿವೆ.

ಸತ್ಯವೇದದ ಕಾಲದಲ್ಲಿ ಪೂರ್ವದೇಶಗಳ ಜನರು ಹೆಸರುಗಳಿಗೆ ಹೆಚ್ಚಿನ ಮಹತ್ವವನ್ನು ತಳಿಕೆಹಾಕುತ್ತಿದ್ದರು. ಇಬ್ರಿಯ ಜನರು ಹೆಸರಿಡುವಾಗ ವ್ಯಕ್ತಿಯ ಗುಣಸ್ವಭಾವವನ್ನು ಸೂಚಿಸುವ ಪದದ ಬಗ್ಗೆ ಆಲೋಚಿಸುತ್ತಿದ್ದರು ಅಥವಾ ಹೆಸರಿಡುವವನ ಚಿಂತನೆ ಮತ್ತು ಭಾವನೆಗಳನ್ನು ಸೂಚಿಸುತ್ತಿತ್ತು ಅಥವಾ ಹೆಸರು ಕೊಡುವಾಗಿನ ಸನ್ನಿವೇಶ, ಸಂದರ್ಭವನ್ನು ಸೂಚಿಸುತ್ತಿತ್ತು. ಎಸ್.ಡಿ.ಎ. ಸತ್ಯವೇದ ವ್ಯಾಖ್ಯಾನ ಮೊದಲನೆ ಸಂಪುಟ 523ನೇ ಪುಟ.

ದೇವರು ಅಬ್ರಹಾಮನ ಜೊತೆ ಒಡಂಬಡಿಕೆ ಸಂಬಂಧಕ್ಕೆ ಪ್ರವೇಶಿಸುವಾಗ ತನ್ನನ್ನು ಅಬ್ರಹಾಮನಿಗೆ ಯಹ್‌ವ್ಹೇ ಎಂಬ ಹೆಸರಿನಿಂದ ಗೊತ್ತುಪಡಿಸಿಕೊಂಡನು. ಇದನ್ನು ಕನ್ನಡದಲ್ಲಿ ಕರ್ತನು ಎಂಬುದಾಗಿ ಅನುವಾದ ಮಾಡಲಾಗಿದೆ. ಆದಿಕಾಂಡ 15:7ನೇ ವಚನವು ಪದಶಃ "ನಿನ್ನನ್ನು... ಕರೆದ ಯೆಹೋವನೆ ನಾನು" ಎಂಬುದಾಗಿ ಓದಿಸಿಕೊಳ್ಳುತ್ತದೆ.

ಯಹ್‌ವ್ಹೇ ಎಂಬ ಪದವು ಹಳೆಯ ಒಡಂಬಡಿಕೆಯಲ್ಲಿ 6828 ಸಲ ಕಾಣಿಸಿಕೊಂಡಿದ್ದರೂ ಅದು ಒಂದು ರೀತಿಯ ರಹಸ್ಯದಿಂದ ಸುತ್ತುವರೆದಿದೆ. 'ಯಾಹು' ಎಂಬುದರ ಕ್ರಿಯಾಪದ ಯಹ್‌ವ್ಹೇ ಆಗಿದ್ದು ಇದು ಎಂದೆಂದಿಗೂ ಇರುವಾತನು (ಶಾಶ್ವತನು), ಅಸ್ತಿತ್ವನು, ಸ್ವ-ಅಸ್ತಿತ್ವನು ಸ್ವಾವಲಂಬಿಯು ಅಥವಾ ಎಂದೆಂದಿಗೂ ಜೀವಿಸುವಾತನು ಎಂಬ ಅರ್ಥವನ್ನು ಕೊಡುವಂಥದ್ದಾಗಿದೆ. ಇವುಗಳಲ್ಲಿ ಸ್ವಅಸ್ತಿತ್ವನು ಮತ್ತು ನಂಬಿಗಸ್ತನು ಎಂಬವು ಆತನ ದೈವೀಕ ಗುಣಗಳಿಗೆ ಒತ್ತುಕೊಡುವ ಬಿರುದುಗಳಾಗಿವೆ. ಇವು ದೇವರನ್ನು ಜೀವಿಸುವದೇವನೆಂದು, ಜೀವದ ಮೂಲನೆಂದು ಸೂಚಿಸುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ ಅನ್ಯದೇವತೆಗಳು ಅವುಗಳನ್ನು ಪೂಜಿಸುವವರ ಕಲ್ಪನೆಗಳಾಗಿವೆಯೇ ಹೊರತು ನಿಜವಾಗಿ ಅಸ್ತಿತ್ವದಲ್ಲಿರುವುದಿಲ್ಲ.

ದೇವರು ತಾನಾಗಿಯೇ ಯಹ್ವೇ ಎಂಬುದರ ಅರ್ಥವನ್ನು ವಿಮೋಚನಕಾಂಡ 8:14ರಲ್ಲಿ "ಇರುವಾತನೇ ಆಗಿದ್ದೇನೆ" ಎಂಬುದಾಗಿ ವಿವರಿಸುತ್ತಾನೆ. ಈ ಅರ್ಥವು ದೇವರು ವಾಸ್ತವಿಕವಾಗಿ ಯಾವುದರ ನಿಯಂತ್ರಣಕ್ಕೂ ಬಾರದ ತಾನು ತಾನಾಗಿಯೇ ಅಸ್ತಿತ್ವದಲ್ಲಿರುವಾತನು ಎಂಬುದನ್ನು ವ್ಯಕ್ತಪದಿಸುತ್ತದೆ. ಇದು ಆತನು ಭೂತ, ವರ್ತಮಾನ ಭವಿಷ್ಯವನ್ನು ವಶದಲ್ಲಿಟ್ಟು–ಕೊಂಡಿರುವವನೆಂತಲೂ ಅರ್ಥಕೊಡುತ್ತದೆ.

ಯಹ್ವೇ ಎಂಬುದು ದೇವರ ವೈಯಕ್ತಿಕ ಹೆಸರೂ ಆಗಿದೆ. ಯಹ್ವೇ ಅಬ್ರಹಾಮನನ್ನು ಊರ್ ಎಂಬ ಪಟ್ಟಣದಿಂದ ಹೊರಕ್ಕೆ ಕರೆದುತಂದವನ ಗುರುತಾಗಿ ಆದಿಕಾಂಡ 12:1–3ನೇ ವಚನಗಳಲ್ಲಿ ಅಬ್ರಹಾಮನೊಂದಿಗೆ ಮಾಡಿಕೊಂಡ ದೇವರ ಒಡಂಬಡಿಕೆಯ ಪ್ರಕಟನೆಯನ್ನು ಕುರಿತು ಹೇಳುತ್ತದೆ. ಅಬ್ರಹಾಮನಿಗೆ ತನ್ನ ಹೆಸರು ಗೊತ್ತಿರಬೇಕೆಂದು ದೇವರು ಬಯಸಿದನು, ಯಾಕೆಂದರೆ ವ್ಯಕ್ತಿತ್ವದ ಗುಣಲಕ್ಷಣ ಮತ್ತು ಸ್ವಭಾವದ ಸ್ವರೂಪವನ್ನು ತೋರಿಸುತ್ತದೆ. ಈ ಅರಿವಿನಿಂದ ನಾವು ಆತನ ವಾಗ್ದಾನಗಳ ಮೇಲೆ ಭರವಸೆವಿಡಬಹುದಾಗಿದೆ (ಕೀರ್ತ 9:10 ಮತ್ತು 91:14).

ನಾವು ಯಹ್ವೇ ಹೆಸರನ್ನು ಕೇಳಿಸಿಕೊಂಡಾಗ ಮತ್ತು ಆಲೋಚಿಸಿಕೊಂಡಾಗ ಯಾವ ಗುಣಸ್ವಭಾವಗಳು ನಮ್ಮ ಮನಸ್ಸಿಗೆ ಬರುತ್ತವೆ? ದಯೆ, ಪರಾಂಬರಿಕೆಯನ್ನು ವ್ಯಕ್ತಪಡಿಸುವಂಥವೇ ಅಥವಾ ಭಯ, ಕಟ್ಟುನಿಟ್ಟು ಮತ್ತು ಶಿಸ್ತನ್ನು ವ್ಯಕ್ತಪದಿಸುವಂಥವೇ? ನೀವು ಯೇಸು ಎಂಬ ಹೆಸರನ್ನು ನೆನಸಿದಾಗ ಯುವ ಆಲೊಚನೆಗಳು ತಾನಾಗಿ ಮನಸ್ಸಿಗೆ ಬರುತ್ತವೆ?

**ಸೋಮವಾರ** **ಏಪ್ರಿಲ್ 19**

## ಎಲ್ ಶಡ್ಡಾಯ್ (El-Shaddai)

ಅಬ್ರಾಮನು ತೊಂಭತ್ತೊಂಭತ್ತು ವರುಷದವನಾದಾಗ ಯೆಹೋವನು ಅವನಿಗೆ ದರ್ಶನ ಕೊಟ್ಟು– ನಾನು ಸರ್ವಶಕ್ತನಾದ ದೇವರು ನನಗೆ ನಡಕೊಂಡು ದೋಷವಿಲ್ಲದವನಾಗಿರು (ಆದಿಕಾಂಡ 17:1).

ಇದಕ್ಕೂ ಮೊದಲು ಯೆಹ್‌ವ್ಹೇ ಅಬ್ರಾಮನಿಗೆ ಅನೇಕ ಸಲ ಕಾಣಿಸಿಕೊಂಡಿದ್ದನು (ಆ.ಕಾಂಡ 12:1,7; ಆ.ಕಾಂಡ 13:14, ಆ.ಕಾಂಡ 15:1,7,8). ಈವಾಗ ಮೇಲಿನ ವಚನದಲ್ಲಿ ಯೆಹೋವನು ಅಬ್ರಾಮನಿಗೆ ಕಾಣಿಸಿಕೊಳ್ಳುತ್ತಾನೆ (ಯೆಹೋವನು ಅವನಿಗೆ ದರ್ಶನ ಕೊಟ್ಟನು). ಆತನು ತನ್ನನ್ನು ಸರ್ವಶಕ್ತ ದೇವರನ್ನಾಗಿ ಮಂಡಿಸುತ್ತಾನೆ. ಆದಿಕಾಂಡ ಮತ್ತು ಯೋಬನು ಇವೆರಡು ಪುಸ್ತಕಗಳಲ್ಲಿ ತನ್ನ ಹೆಸರನ್ನು ವಿಶೇಷವಾಗಿ ಕರೆದುಕೊಂಡಿದ್ದಾನೆ. 'ಸರ್ವಶಕ್ತನಾದ ದೇವರು' ಎಂಬುದು ಸೆಮೈಟ್ ಜನಾಂಗವು ಮೂಲವಾಗಿ ಕರೆಯುವ 'ಎಲ್' ಎಂಬ ಪದವನ್ನು ಹೊಂದಿದೆ. ಶಡಾಯ್ ಎಂಬಲ್ಲಿ ಪದದ ನಿಖರವಾದ ಅರ್ಥ ಪೂರ್ಣವಾಗಿ ಖಾತ್ರಿ ಪಟ್ಟಿಲ್ಲದಿದ್ದಾಗ್ಯೂ ಸರ್ವಶಕ್ತ ಎಂಬುದಾಗಿ ಅನುವಾದಗೊಂಡಿರುವುದು ಅತ್ಯಂತ ನಿಖರವಾಗಿ ಕಾಣುತ್ತದೆ (ಯೆಶಾಯ 13:6 ಮತ್ತು ಯೋವೇಲ 1:15 ಎರಡನ್ನೂ ಹೋಲಿಸಿ ನೋಡಿರಿ). ದೇವರ ಸಾಮರ್ಥ್ಯ ಮತ್ತು ಅಧಿಕಾರಕ್ಕೆ ವ್ಯತಿರಿಕ್ತವಾಗಿ ಮಾನವನ ದೈಹಿಕ ಬಲಹೀನತೆ ಮತ್ತು ನೈತಿಕ ದೌರ್ಬಲ್ಯಕ್ಕೆ ಎಷ್ಟೊಂದು ಅಂತರವೆಂಬ ಆಲೋಚನೆಯ ಮೇರೆಗೆ ಈ ಹೆಸರು ಉಪಯೋಗಿಸಲ್ಪಟ್ಟಿದೆ.

ಆದಿಕಾಂಡ 17:1–6ನ್ನು ಓದಿರಿ. ಇದು ಪ್ರತಿಯೊಂದನ್ನು ವಿಶಾಲವಾದ ಅರ್ಥದಲ್ಲಿ ಇಡಲು ಸಹಾಯ ಮಾಡುತ್ತದೆ. ಈ ಸಂದರ್ಭದಲ್ಲಿ ಯಾಕೆ ಕರ್ತನಾದ ದೇವರು ಅಬ್ರಾಮನಿಗೆ ತನ್ನ ಶಕ್ತಿ ಮತ್ತು ಅಧಿಕಾರದ ಬಗ್ಗೆ ಒತ್ತು ಕೊಟ್ಟು ಹೇಳಬೇಕಾಯ್ತು? ಆದಿಕಾಂಡ 17:6ನೇ ವಚನಕ್ಕನುಸಾರವಾಗಿ ಅಬ್ರಾಮನು ದೇವರ ಶಕ್ತಿ ಮತ್ತು ಅಧಿಕಾರದ ಮೇಲೆ ಭರವಸವಿಡಬೇಕೆಂದು ಹೇಳುತ್ತಿರುವುದು ಯಾಕೆ?

ಆದಿಕಾಂಡ 17:1–6 ವಚನಗಳನ್ನು ವಾಸ್ತವಿಕವಾಗಿ ಹೀಗೆ ಅನುವಾದಿಸಬಹುದು. ಯೆಹೋವನು ಅಬ್ರಾಮನಿಗೆ ಕಾಣಿಸಿಕೊಂಡು ನಾನು ಎಲ್‌ಶಡ್ಡಾಯ್ ನನ್ನ ಮುಂದೆ ದೋಷವಿಲ್ಲದವನಾಗಿ ನಡೆದುಕೊ ನಾನು ನಿನ್ನೊಡನೆ ನನ್ನ ಒಡಂಬಡಿಕೆಯನ್ನು ಮಾಡಿಕೊಳ್ಳುತ್ತೇನೆ. ನಾನು ನಿನ್ನನ್ನು ಬಹಳವಾಗಿ ಹೆಚ್ಚಿಸುತ್ತೇನೆ. ನೀನು ಅನೇಕ ಜನಾಂಗಗಳಿಗೆ ತಂದೆಯಾಗುವಿ,

ನಿನಗೆ ಅತ್ಯಧಿಕವಾಗಿ ಸಂತಾನ ಕೊಡುವೆನು. ಈ ಹೆಸರು ಆದಿಕಾಂಡ 28:3ನೇ ವಚನದಲ್ಲಿಯೂ ಕಾಣಿಸಿಕೊಳ್ಳುತ್ತದೆ. ಇಲ್ಲಿ ಇಸಾಕನು ತನ್ನ ಮಗನಾದ ಯಾಕೋಬನಿಗೆ 'ಎಲ್‌ಶಡ್ಡಾಯ್ ನಿನ್ನನ್ನು ಆಶೀರ್ವದಿಸಿ ನಿನಗೆ ಬಹಳ ಸಂತತಿಯನ್ನು ಕೊಟ್ಟು ನಿನ್ನಿಂದ ಅನೇಕ ಜನಾಂಗಗಳು ಹುಟ್ಟದಂತೆ ಅನುಗ್ರಹಿಸಲಿ ಎಂದು ಹೇಳುತ್ತಾನೆ.

'ಎಲ್‌ಶಡ್ಡಾಯ್' ಮಾಡುವ ಇದೇ ತೆರನಾದ ವಾಗ್ದಾನವನ್ನು ಆದಿಕಾಂಡ 35:11, ಆದಿಕಾಂಡ 43:14 ಮತ್ತು ಆದಿಕಾಂಡ 49:25ರಲ್ಲಿ ಕಾಣುತ್ತೇವೆ. ಇವು ದೇವರು ಉದಾರವಾಗಿ ಕೊಡುವ ಸಮೃದ್ಧಿಯನ್ನು ಕುರಿತು ಹೇಳುತ್ತದೆ: ಎಲ್– ಬಲ ಮತ್ತು ಅಧಿಕಾರವುಳ್ಳ ದೇವರು, ಶಡ್ಡಾಯ್– ಎಂದೆಂದಿಗೂ ತೀರು ಹೋಗದಂಥ ಸಮೃದ್ಧಿಯನ್ನು ಕೊಡುವ ದೇವರು. ತನ್ನನ್ನು ನಂಬಿಕೆಯಿಂದಲೂ ವಿಧೇಯತ್ವದಿಂದಲೂ ಹುಡುಕುವವರಿಗೆ ಅನುಗ್ರಹಿಸಲು ಸಿದ್ಧವಾಗಿರುವಾತನಿಂದ ದೊರಕುವ ಸಮೃದ್ಧಿಯು ಇದಾಗಿದೆ.

ಒಂದು ಗುಲಾಬಿ ಹೂವನ್ನು ಯಾವ ಹೆಸರಿನಿಂದ ಕರೆದರೇನು ಅದು ಬೀರುವ ಪರಿಮಳವು ಇದ್ದೇ ಇರುತ್ತದೆಯಲ್ಲವೆ. ಅದರ ಹೆಸರು ಮುಖ್ಯವಲ್ಲವೆಂಬ ಆಲೋಚನೆಯ ಬಗ್ಗೆ ನೀವು ಕೇಳಿರಬಹುದು. ದೇವರ ಹೆಸರನ್ನು 'ಅಶಕ್ತನಾದ ದೇವರು', 'ದುರ್ಬಲನಾದ ದೇವರು' ಎಂದು ಕರೆಯುವಾಗ ನಮಗೆ ಆದರಣೆಯೂ ಭರವಸೆಯು ಸಿಗುತ್ತದೆಯೆ? ಈ ದಿನದ ವಚನವನ್ನು ನೋಡಿರಿ. ಮೇಲೆ ಹೇಳಿರುವ ಅಶಕ್ತ ಮತ್ತು ದುರ್ಬಲ ಎಂಬ ಪದಗಳನ್ನು ಸರ್ವಶಕ್ತ ಎಂಬುದಾಗಿ ಬದಲಾಯಿಸಿರಿ. ಆವಾಗ ಸರ್ವಶಕ್ತನಾಗಿಯೇ ದೇವರು ತನ್ನನ್ನು ನಿಮಗೆ ತೋರಿಸಿಕೊಂಡರೆ ನಮ್ಮ ನಂಬಿಕೆ ಮತ್ತು ಭರವಸೆಗೆ ಏನಾಗುತ್ತದೆ? ಅದೇ ಸಂದರ್ಭದಲ್ಲಿ ಎಲ್‌ಶಡ್ಡಾಯ್ ನಮಗೆ ಹೇಗೆ ಆದರಣೆ ನೀಡುತ್ತದೆ?

**ಮಂಗಳವಾರ** **ಏಪ್ರಿಲ್ 20**

## ಅಬ್ರಾಮನಿಂದ ಅಬ್ರಹಾಮನಿಗೆ

ದೇವರ ಹೆಸರಿಗೆ ಆಧ್ಯಾತ್ಮಿಕ ಮತ್ತು ಧಾರ್ಮಿಕ ಮಹತ್ವವಿದ್ದಾಗ್ಯೂ ಅಂತಹ ಮಹತ್ವ ದೇವರಿಗೆ ಹೆಸರಿಗೆ ಮಾತ್ರವಲ್ಲದೆ ಇತರೆ ಹೆಸರುಗಳಿಗೂ ಇರುತ್ತದೆ.

ಪುರಾತನ ಪೂರ್ವದೇಶದ ಜನರುಗಳ ಹೆಸರುಗಳು ನಮಗೆ (ಪಶ್ಚಿಮ ದೇಶದವರಿಗೆ) ಅರ್ಥವಿಲ್ಲದವುಗಳು ಅನ್ನಿಸಬಹುದು. ಇಂದು ಒಂದು ಹುಡುಗಿಯ ಹೆಸರು 'ಮೇರಿ' ಅಥವಾ 'ಸೂಸಿ' ಯಾವುದೇ ಆಗಿದ್ದರೂ ನಮಗೆ ವ್ಯತ್ಯಾಸ ಕಾಣುವುದಿಲ್ಲ. ಆದರೆ ಪುರಾತನ ಇಬ್ರಿಯದವರಲ್ಲಿ ಹೆಸರುಗಳು ಆಧ್ಯಾತ್ಮಿಕವಾಗಿ ಹೆಚ್ಚು ಅರ್ಥವನ್ನು ಹೊಂದಿರುತ್ತಿದ್ದವು. ಇಬ್ರಿಯರ ಹೆಸರುಗಳೆಲ್ಲ ಹೆತ್ತ ತಂದೆತಾಯಿಗಳ ಕೃತಜ್ಞತೆಯನ್ನು ಹಾರೈಸುವಿಕೆಗಳನ್ನು ವ್ಯಕ್ತಪಡಿಸುವ ಪದವೃಂದಗಳಾಗಿರುತ್ತಿದ್ದವು ಅಥವಾ ಸಣ್ಣ ವಾಕ್ಯಗಳೇ ಆಗಿರುತ್ತಿದ್ದವು. ಉದಾಹರಣೆಗೆ ದಾನಿಯೇಲ ಎಂಬ ಹೆಸರು "ದೇವರು ನನ್ನ ನ್ಯಾಯಾಧಿಪತಿ". ಯೋವೇಲ ಎಂಬ ಹೆಸರು ಯೆಹೋವನು ದೇವರು, ನಾತಾನ ಎಂಬ ಹೆಸರು ದೇವರ ಉಡುಗೊರೆ ಎಂಬ ಅರ್ಥಗಳನ್ನು ಕೊಡುತ್ತಿದ್ದವು.

ಹೆಸರುಗಳ ಜೊತೆಗೆ ಈ ವಿಶೇಷತೆಗಳು ಇರುತ್ತಿದ್ದ ಕಾರಣ ಹೆಸರಿನ ಬದಲಾವಣೆಯು ಒಬ್ಬನ ಜೀವನದಲ್ಲಿ ಮತ್ತು ಸನ್ನಿವೇಶದಲ್ಲಿ ಆದಂತಹ ಅಗಾಧವಾದ ಆಮೂಲಾಗ್ರ ಪರಿವರ್ತನೆಯನ್ನು ಸೂಚಿಸುತ್ತಿದ್ದವು.

ಈ ಕೆಳಗಿನ ವಚನಗಳನ್ನು ನೋಡಿರಿ. ಯಾವ ಸನ್ನಿವೇಶವನ್ನು ಕುರಿತು ಹೇಳುತ್ತಿವೆ ಮತ್ತು ಈ ಸಂದರ್ಭಗಳಲ್ಲಿ ಹೆಸರುಗಳನ್ನು ಯಾಕೆ ಬದಲಾಯಿಸಲಾಯ್ತು?

ಆದಿಕಾಂಡ 32:28 ________________________________

ಆದಿಕಾಂಡ 41:45 ________________________________

ದಾನಿಯೇಲ 1:7 ________________________________

ಏನೇ ಆಗಲಿ ಒಂದು ರೀತಿಯಲ್ಲಿ ಒಂದು ಹೆಸರಿನಿಂದ ಕರೆಯಲ್ಪಡುವ ಒಬ್ಬ ವ್ಯಕ್ತಿಯು ಎಂಥವನು ಆ ಹೆಸರಿನ ವಿಶೇಷತೆ ಏನು ಎಂಬುದನ್ನು ಆಧುನಿಕ ಮನಸ್ಸುಗಳು ಸಹಾ ಅರ್ಥಮಾಡಿಕೊಳ್ಳುವುದು ಕಷ್ಟವೇನಲ್ಲ. ಕೆಲವು ಸಲ ಹೆಸರುಗಳು ಮಾರ್ಮಿಕವಾಗಿರುತ್ತವೆ. ಮತ್ತೆ ಕೆಲವು ಸಲ ಅಂತಹ ಮಾರ್ಮಿಕವಾದ ಪರಿಣಾಮಗಳೇನು ಇರುವುದಿಲ್ಲ. ಒಬ್ಬ ವ್ಯಕ್ತಿಯನ್ನು ಯಾವಾಗಲೂ 'ಮೂರ್ಖ' ಅಥವಾ 'ಕುರೂಪಿ' ಎಂಬುದಾಗಿ ಕರೆಯುತ್ತಿದ್ದರೆ

ಮತ್ತು ಎಲ್ಲರೂ ಆತನನ್ನು ಹಾಗೆಯೇ ಆ ಹೆಸರುಗಳಿಂದಲೇ ಕರೆಯ ತೊಡಗಿದರೆ ಈಗಲೋ ಅಥವಾ ನಂತರವೋ ಆ ಹೆಸರುಗಳು ಆ ಮನುಷ್ಯನು ತನ್ನ ಬಗ್ಗೆ ತಾನು ಹೊಂದುವ ಅಭಿಪ್ರಾಯದ ಮೇಲೆ ಒಂದು ಪರಿಣಾಮವನ್ನು ಬೀರುತ್ತದೆ. ಅದೇ ರೀತಿಯಲ್ಲಿ ಜನರಿಗೆ ಕೆಲವು ಹೆಸರುಗಳನ್ನು ಇಟಾನಾಗ ಇಲ್ಲವೇ ಅವರ ಹೆಸರುಗಳನ್ನು ಬದಲಾಯಿಸಿದಾಗ ಅವರು ತಮ್ಮನ್ನು ನಾವು ಹೇಗೆ ಭಾವಿಸಿ–ಕೊಳ್ಳುತ್ತಾರೆ ಮತ್ತು ಅದರಿಂದ ಹೇಗೆ ವರ್ತಿಸತೊಡಗುತ್ತಾರೆ ಎಂಬುದರ ಮೇಲೆ ಪ್ರಭಾವ ಬೀರುತ್ತದೆ.

ಇದನ್ನು ಮನಸ್ಸಿನಲ್ಲಿಟ್ಟುಕೊಂಡರೆ ದೇವರು ಯಾಕೆ ಅಬ್ರಾಮನ ಹೆಸರನ್ನು ಅಬ್ರಹಾಮನೆಂದು ಬದಲಿಸಿದನು ಎಂಬುದನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗುವುದಿಲ್ಲ. ಅಬ್ರಾಮನು ಎಂದರೆ "ತಂದೆಯು ಉನ್ನತೀಕರಿಸಲ್ಪಟ್ಟನು". ಇದನ್ನು ಅಬ್ರಹಾಮನೆಂದು ಮರುನಾಮಕರಣ ಮಾಡಿದನು. ಹಾಗೆಂದರೆ "ಬಹಳ ಸಂತತಿಗಳಿಗೆ ತಂದೆಯಾಗುವಿ" ಎಂಬ ಅರ್ಥಕೊಡುತ್ತದೆ. ದೇವರು ಆತನೊಂದಿಗೆ ಮಾಡಿಕೊಂಡ ಒಡಂಬಡಿಕೆಯ ವಾಗ್ದಾನಗಳನ್ನು ಗಮನಿಸಿದರೆ ದೇವರು ಅವನ ಸಂಗಡ ಮಾತಾಡಿ "ನಾನಂತೂ ನಿನಗೆ ವಾಗ್ದಾನ ಮಾಡುತ್ತೇನೆ; ಏನೆಂದರೆ ನೀನು ಅನೇಕ ಜನಾಂಗಗಳಿಗೆ ಮೂಲಪುರುಷನಾಗುವಿ. ಇನ್ನು ಮುಂದೆ ನಿನಗೆ ಅಬ್ರಾಮ ಎಂದು ಹೆಸರಿರುವುದಿಲ್ಲ. ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲಪಿತೃವಾಗಿ ನೇಮಿಸಿರುವುದರಿಂದ ನಿನಗೆ ಅಬ್ರಹಾಮನೆಂದು ಹೆಸರಿರುವುದು. ನಿನಗೆ ಅತ್ಯಧಿಕವಾದ ಸಂತಾನವನ್ನು ಕೊಡುವೆನು. ನಿನ್ನಿಂದ ಜನಾಂಗಗಳು ಉತ್ಪತ್ತಿಯಾಗಿ ಅರಸರು ಹುಟ್ಟುವರು" ಎಂದು ಹೇಳುತ್ತಾನೆ (ಆದಿಕಾಂಡ 17:6). ಹೀಗಿರುವದರಿಂದ ಅವನ ಹೆಸರಿನ ಬದಲಾವಣೆಗೆ ಒಂದು ಅರ್ಥಬರುತ್ತದೆ. ಅದುವರೆಗೆ ಸಂತಾನವಿಲ್ಲದ ವಯಸ್ಸು ಕಳೆದು ಹೋದ ಹೆಂಡತಿಯುಳ್ಳ 99 ವರ್ಷದ ಮುದುಕನಿಗೆ ದೇವರು ಮಾಡಿದ ವಾಗ್ದಾನವು ಬಹುಶಃ ದೇವರು ಅವನಿಗೆ ಒಡಂಬಡಿಕೆಯ ಮೇಲೆ ಭರವಸೆ ಹುಟ್ಟಿಸಲು ಸಹಾಯ ಮಾಡುವ ವಿಧಾನವಾಗಿರಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ ತನ್ನ ವಾಗ್ದಾನಗಳ ಮೇಲೆ ಅಬ್ರಹಾಮನ ನಂಬಿಕೆ ಹೆಚ್ಚುವಂತೆ ಸಹಾಯ ಮಾಡಲು ಹೀಗೆ ಒಡಂಬಡಿಕೆ ಮಾಡಿಕೊಂಡನು.

**ಬುಧವಾರ** **ಏಪ್ರಿಲ್ 21**

## ಒಡಂಬಡಿಕೆಯ ಹಂತಗಳು (ಆದಿಕಾಂಡ 12:1,2)

ಮೇಲೆ ಹೇಳಿರುವ ಎರಡು ವಚನಗಳಲ್ಲಿ ದೇವರು ಅಬ್ರಹಾಮನಿಗೆ ಮಾಡಿದ ಒಡಂಬಡಿಕೆ ವಾಗ್ದಾನದ ಮೊದಲ ಹಂತವು ಪ್ರಕಟಗೊಂಡಿದೆ. ದೇವರು ಅಬ್ರಹಾಮನ ಬಳಿಗೆ ಬಂದು ಆತನಿಗೆ ಆಜ್ಞೆಯೊಂದನ್ನು ಕೊಟ್ಟು ನಂತರ ಅವನಿಗೆ ವಾಗ್ದಾನ ನೀಡಿದನು.

ದೇವರು ಅಬ್ರಹಾಮನನ್ನು ತನ್ನ ವಿಶೇಷವಾದ ಒಡಂಬಡಿಕೆಗೆ ಮೊದಲ ಪ್ರಧಾನ ವ್ಯಕ್ತಿಯನ್ನಾಗಿ ಮಾಡಲು ತಾನಾಗಿ ಆತನ ಬಳಿಗೆ ಧಾವಿಸಿ ಬಂದು ಅವನನ್ನು ಆರಿಸಿಕೊಂಡನು. ಇದು ದೇವರಕೃಪೆಯನ್ನು ವ್ಯಕ್ತಪಡಿಸುತ್ತದೆ. ಆಜ್ಞೆಯು ಅಬ್ರಹಾಮನು ದೇವರ ಮೇಲೆ ಇಟ್ಟಿರುವ ಪೂರ್ಣವಾದ ನಂಬಿಕೆಯನ್ನು ಪರೀಕ್ಷೆಗೆ ಒಳಪಡಿಸುತ್ತಿತ್ತು (ಇಬ್ರಿಯ 11:8). ವಾಗ್ದಾನವು (ಆ.ಕಾಂಡ 12:1–3,7) ನಿರ್ದಿಷ್ಟವಾಗಿ ಅಬ್ರಹಾಮನ ಸಂತತಿಯ ಸಲುವಾಗಿ ಮಾಡಿದ್ದಾಗ್ಯೂ, ಅಂತಿಮವಾಗಿ ವಾಗ್ದಾನವು ಇಡೀ ಮಾನವ ಸಂತತಿಯನ್ನು ಒಳಗೊಂಡಿದೆ (ಆ.ಕಾಂಡ 12:3, ಗಲಾ 3:6–9).

ದೇವರು ಅಬ್ರಾಮನೊಂದಿಗೆ ಮಾಡಿದ ಒಡಂಬಡಿಕೆಯ ಎರಡನೇ ಹಂತವು ಆದಿಕಾಂಡಾ 15:7–18ನೇ ವಚನಗಳಲ್ಲಿ ಕಾಣಿಸಿಕೊಳ್ಳುತ್ತದೆ. ಯಾವ ವಚನಗಳಲ್ಲಿ ಮೊದಲ ಹಂತದಲ್ಲಿರುವ ಕಂಡುಬರುವ ಅದೇ ವಿಧಾನವು (ಮೆಟ್ಟಿಲುಗಳು) ಕಂಡುಬರುತ್ತದೆ?

ದೇವರು ಮನುಷ್ಯನೆಡೆಗೆ ಧಾವಿಸಿ ಬಂದುದು.......... ವಚನಗಳು?

ಮನುಷ್ಯನು ವಿಧೇಯತ್ವಕ್ಕೆ ಕರೆ – ವಚನಗಳು?

ದೈವಿಕ ವಾಗ್ದಾನಗಳು – ವಚನಗಳು?

ಒಡಂಬಡಿಕೆಯು ಎರಡನೇ ಹಂತದಲ್ಲಿ ಗಂಭೀರವಾದ ಧಾರ್ಮಿಕ ಆಚರಣೆಯಾಗಿದ್ದು, ಅಬ್ರಾಮನು ಬಲಿಯರ್ಪಿಸಿ ಪ್ರಾಣಿಗಳನ್ನು ಎರಡೆರಡು ಹೋಳು ಮಾಡಿ ತುಂಡಿಗೆ ತುಂಡನ್ನು ಎದುರಾಗಿ ಜೋಡಿಸಿ ಇಟ್ಟನು. ದೇವರು ಅಬ್ರಾಮನಿಗೆ ಕಾಣಿಸಿಕೊಂಡು ಇವುಗಳ ಮಧ್ಯೆ ಹಾದು ಹೋದನು. ಒಡಂಬಡಿಕೆಗೆ

ಪ್ರವೇಶ ಮಾಡುವವರು ಭಾಗಮಾಡಿದ ಎರಡು ತುಂಡುಗಳ ನಡುವೆ ನಡೆದು ಹೋಗಬೇಕು, ಸಾಂಕೇತಿಕವಾಗಿ ಇದು ಮಾಡಿಕೊಂಡ ಒಪ್ಪಂದಕ್ಕೆ ಎಂದೆಂದಿಗೂ ವಿಧೇಯರಾಗುವಂತೆ ಬದ್ಧಪಡಿಸುತ್ತದೆ.

ದೇವರು ಅಬ್ರಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯ ಮೂರನೇ ಹಾಗೂ ಅಂತಿಮಹಂತದಲ್ಲಿ ಏನು ನಡೆಯಿತೆಂಬುದನ್ನು ವಿವರಿಸಿ (ಆ.ಕಾಂಡ 17:1–14).

ಅಬ್ರಹಾಮ ಎಂಬ ಹೆಸರಿನ ಅರ್ಥವು ದೇವರು ಎಲ್ಲಾ ಜನರನ್ನು ರಕ್ಷಿಸಲು ಬಯಸುತ್ತಾನೆ ಮತ್ತು ಅದಕ್ಕಾಗಿ ಏರ್ಪಾಟು ಮಾಡುತ್ತಾನೆ ಎಂಬುದನ್ನು ಒತ್ತಿ ಹೇಳುತ್ತದೆ. ಎಲ್ಲಾ ಕುಲಗಳು ಎಂಬ ಪದವೃಂದವು ಯೆಹೂದ್ಯರನ್ನೂ ಅನ್ಯಜನಾಂಗವನ್ನೂ ಒಳಗೊಳ್ಳುತ್ತದೆ. ಯಾರು ಅಬ್ರಹಾಮನ ಹಾಗೆ ದೇವರಲ್ಲಿ ನಂಬಿಕೆ ಇಟ್ಟು ವಾಗ್ದತ್ತ ಯೇಸುಕ್ರಿಸ್ತನ ನೀತಿಯ ಮೇಲೆ ಭರವಸವಿಡುತ್ತಾರೋ ಅವರೆಲ್ಲರೂ ಅಬ್ರಹಾಮನ ನಿಜವಾದ ಮಕ್ಕಳು ಎಂಬುದಾಗಿ ಹೊಸ ಒಡಂಬಡಿಕೆಯು ಬಹಳವಾಗಿ ಸ್ಪಷ್ಟಪಡಿಸುತ್ತದೆ (ಗಲಾತ್ಯ 3:7,29). ಹೇಗೆ ದೇವರು ಅಬ್ರಹಾಮನ ಕಾಲದಿಂದಲೂ ಎಲ್ಲ ದೇಶದ ಜನರನ್ನು ರಕ್ಷಿಸಲು ಬಯುಸಿದನೋ ಹಾಗೆಯೇ ಇಂದು ಸಹಾ ಹಾಗೆಯೇ ಎಲ್ಲರನ್ನೂ ರಕ್ಷಿಸುವವನಾಗಿದ್ದಾನೆ.

ಪ್ರಕಟನೆ 14:6,7 ವಚನಗಳಲ್ಲಿರುವ ಮೊದಲ ದೂತನ ಸಂದೇಶವನ್ನು ಓದಿರಿ. ಅಬ್ರಹಾಮನ ಒಡಂಬಡಿಕೆಯಲ್ಲಿ ಸಿಗುವ ಸಾಮಾನ್ಯ (ಸಮಾನವಾದ) ಸಂಗತಿಗಳಾವುವು? ಯಾವ ರೀತಿಯಲ್ಲಿ ಇವು ಸಾಮಾನ್ಯವಾಗಿವೆ?

**ಗುರುವಾರ** **ಏಪ್ರಿಲ್ 22**

## ಒಡಂಬಡಿಕೆಯ ಬಾಧ್ಯತೆಗಳು

ಅವನು (ಅಬ್ರಹಾಮನು) ತನ್ನ ಪುತ್ರಪೌತ್ರರಿಗೆ – ನೀವು ನ್ಯಾಯನೀತಿಗಳನ್ನು ನಡಿಸಿ ಯೆಹೋವನ ಮಾರ್ಗವನ್ನು ಅನುಸರಿಸಬೇಕೆಂದು ಬೋಧಿಸುವಂತೆ ಅವನನ್ನು ನಾನು ಆದುಕೊಂಡೆನಲ್ಲಾ; ಅವನು ಹೀಗೆ ಮಾಡುವುದರಿಂದ ಯೆಹೋವನಾದ ನನ್ನ ವಾಗ್ದಾನವು ನೆರವೇರುವುದು ಅಂದುಕೊಂಡನು"

(ಆದಿಕಾಂಡ 18:19).

ನಾವು ಇದುವರೆಗೂ ನೋಡಿದಂತೆ ಒಡಂಬಡಿಕೆಯು ಯಾವಾಗಲೂ ನಾವು ನಮಗಾಗಿ ಮಾಡಿಕೊಳ್ಳಲಾಗದ್ದನ್ನು ದೇವರೇ ನಮಗಾಗಿ ಮಾಡುವಂತಹ ಕೃಪೆಯ ಒಡಂಬಡಿಕೆಯಾಗಿದೆ. ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯು ಇದಕ್ಕೆ ಹೊರತಾಗಿಲ್ಲ. ದೇವರು ಕೃಪೆಯಿಂದ ಅಬ್ರಹಾಮನನ್ನು ಇಡೀ ಲೋಕಕ್ಕೆ ರಕ್ಷಣೆಯನ್ನು ಸಾರಿ ಹೇಳುವ ಉಪಕರಣವನ್ನಾಗಿ ಆರಿಸಿಕೊಂಡನು. ದೇವರು ತನ್ನ ಒಡಂಬಡಿಕೆಯನುಸಾರ ವಾಗ್ದಾನಗಳನ್ನು ನೆರವೇರಿಸುವುದು ಅಬ್ರಹಾಮನು ಅದಕ್ಕೆ ಬದ್ಧನಾಗಿ ನೀತಿಯಿಂದಲೂ ನಂಬಿಕೆಯಿಂದಲೂ ವಿಧೇಯನಾಗುವ ಮನದಿಚ್ಛೆಗೆ ಸಂಬಂಧಪಡುತ್ತದೆ. ಅಬ್ರಹಾಮನು ತನ್ನ ಜವಾಬ್ದಾರಿಯಾಗಿ ಅದಕ್ಕೆ ವಿಧೇಯನಾಗದೆ ಹೋಗಿದ್ದರೆ ದೇವರು ಅವನನ್ನು ಉಪಯೋಗಿಸ-ಲಾಗುತ್ತಿರಲಿಲ್ಲ.

ಆದಿಕಾಂಡ 18:19 ವಚನಗಳು ಕೃಪೆ ಮತ್ತು ನ್ಯಾಯಪ್ರಮಾಣ ಹೇಗೆ ಒಂದಕ್ಕೊಂದು ಸಂಬಂಧಪಡುತ್ತವೆ ಎಂಬುದನ್ನು ತೋರ್ಪಡಿಸುತ್ತವೆ. ಇದು ಕೃಪೆಯಿಂದ ಆರಂಭಗೊಳ್ಳುತ್ತದೆ. ನಂತರ ಅಬ್ರಹಾಮನ ವಿಧೇಯತೆ ಮತ್ತು ಆತನು ತನ್ನ ಮನೆಯವರನ್ನು ಸಹಾ ವಿಧೇಯರಾಗುವಂತೆ ಮಾಡುವವನಾಗಿದ್ದನು ಎಂಬ ಸಂಗತಿಯು ಬರುತ್ತದೆ. ನಂಬಿಕೆ ಮತ್ತು ಕ್ರಿಯೆ ಇಲ್ಲಿ ಒಂದಕ್ಕೊಂದು ಒಂದುಗೂಡಬೇಕು, ಹಾಗಾಗಿ ಒಂದುಗೂಡಿವೆ (ಯಾಕೋಬ 2:17).

ಆದಿಕಾಂಡ 18:19ನೇ ವಚನದ ಕಡೇ ಭಾಗವನ್ನು ಗಮನಿಸಿರಿ. ಅಬ್ರಹಾಮನ ವಿಧೇಯತೆ ಬಗ್ಗೆ ಇದು ಏನನ್ನು ಹೇಳುತ್ತದೆ? ವಿಧೇಯತ್ವದ ಮೂಲಕ ರಕ್ಷಣೆಯಾಗುವುದಿಲ್ಲವಾದರೂ ಇದು ಯಾವುದಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತದೆ? ಈ ವಚನದ ಪ್ರಕಾರ ವಿಧೇಯತೆ ಇಲ್ಲದೆ ಒಡಂಬಡಿಕೆಯು ನೆರವೇರಲು ಸಾಧ್ಯವೆ? ನಿಮ್ಮ ಉತ್ತರವನ್ನು ವಿವರಿಸಿರಿ.

ಒಂದು ಒಡಂಬಡಿಕೆಯಿಂದ ದೊರಕುವ ಆಶೀರ್ವಾದಗಳನ್ನು ಅದರ ನಿಬಂಧನೆಗಳನ್ನು ಕೈಗೊಳ್ಳದ ಪಕ್ಷದಲ್ಲಿ ಅದರಿಂದ ಪ್ರಯೋಜನ ಪಡಕೊಂಡವರು (ಫಲಾನುಭವಿಗಳು) ಆಶೀರ್ವಾದಗಳನ್ನು ಅನುಭವಿಸಲಾರರು ಇಲ್ಲವೇ

ನಿರ್ವಹಿಸಿಕೊಂಡು ಹೋಗಲಾರರು. ದೇವರ ಮತ್ತು ಮನುಷ್ಯನ ನಡುವಿನ ಸಂಬಂಧವನ್ನು ವಿಧೇಯತೆಯು ವ್ಯಕ್ತಪಡಿಸುತ್ತದೆ. ದೇವರು ತನ್ನ ಒಡಂಬಡಿಕೆಯ ವಾಗ್ದಾನಗಳನ್ನು ಜನರಿಗೆ ಅವರ ವಿಧೇಯತೆಯ ಮೂಲಕವೇ ನೆರವೇರಿಸುತ್ತಾನೆ.

ಅವಿಧೇಯತ್ವದ ಮೂಲಕ ಒಡಂಬಡಿಕೆಯನ್ನು ಮುರಿಯುವುದು ಸ್ಥಾಪನೆಗೊಂಡ ಸಂಬಂಧ ತೋರುವ ಅಪನಂಬಿಗಸ್ತಿಕೆಯಾಗಿದೆ. ಒಂದು ಒಡಂಬಡಿಕೆಯನ್ನು ಮುರಿದಾಗ ಅದರಿಂದ ಸಿಗುವ ಅನುಗ್ರಹದ ನಿಬಂಧನೆಗಳನ್ನು ಮುರಿದಂತಾಗುವುದಿಲ್ಲ. ಆದರೆ ಅದನ್ನು ನೆರವೇರಿಸುವ ನಿಬಂಧನೆಗಳನ್ನು ಮುರಿದಂತಾಗುವುದು.

ದೇವರೊಂದಿಗೆ ನಿಮಗಿರುವ ಸ್ವಾನುಭಾವದ ಮೂಲಕ ವಿಧೇಯತೆ ಯಾಕೆ ಬಹಳ ಮುಖ್ಯವಾಗಿದೆ ಎಂಬುದನ್ನು ಕಾಣಬಲ್ಲಿರಾ? ನಿಮ್ಮ ಸ್ವಾನುಭಾವದಲ್ಲಿ ಅಥವಾ ಸತ್ಯವೇದದಲ್ಲಿರುವ ಯಾವುದೇ ಉದಾಹರಣೆಯು ಅವಿಧೇಯತೆಯು ಒಡಂಬಡಿಕೆಯ ವಾಗ್ದಾನಗಳ ನೆರವೇರಿಕೆಯನ್ನು ಅಸಾಧ್ಯವಾಗುವ ಹಾಗೆ ಮಾಡುತ್ತವೆ ಎಂಬುದನ್ನು ನಿಮ್ಮ ಮನಸ್ಸಿಗೆ ತರುತ್ತದೆಯೆ? ಹಾಗಿದ್ದರೆ ಅವು ಯಾವುವು ಮತ್ತು ಅವುಗಳಿಗೆ ಏನು ಪರಿಹಾರ?

**ಶುಕ್ರವಾರ** **ಏಪ್ರಿಲ್ 23**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟಮ್ಮನವರ ನಮ್ಮ ಪಿತೃಗಳು ಮತ್ತು ಪ್ರವಾದಿಗಳು ಪುಸ್ತಕದ "ಅಬ್ರಹಾಮನ ಕರೆಯುವಿಕೆ" ಎಂಬ ಅಧ್ಯಾಯವನ್ನು ಓದಿರಿ. ಪುಟ 125–131. ಮತ್ತು ಅಪೋಸ್ತಲರ ಕೃತ್ಯಗಳ ಪುಸ್ತಕದಿಂದ ಯೆಹೂದ್ಯರು ಮತ್ತು ಅನ್ಯರು ಎಂಬ ಅಧ್ಯಾಯವನ್ನು ಓದಿರಿ. ಪುಟ 188–200.

ಮುಗಿಲುಬಿಲ್ಲು ನೋಹನೊಂದಿಗೆ ದೇವರು ಮಾಡಿಕೊಂಡ ಒಡಂಬಡಿಕೆಗೆ ಗುರುತಾಗಿದೆ. ಆದಿಕಾಂಡ 17:10ನೇ ವಚನವನ್ನು ಓದಿರಿ. ಇಲ್ಲಿ ದೇವರು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಗೆ ಯಾವ ಗುರುತನ್ನು ಕೊಟ್ಟನು ಕಂಡುಕೊಳ್ಳಿರಿ.

**ಸುನ್ನತಿಯನ್ನು ವಿಧಿಸಿದುದು:**

1. ಅಬ್ರಹಾಮನ ಸಂತತಿಯನ್ನು ಅನ್ಯಜನಾಂಗದವರಿಂದ ಪ್ರತ್ಯೇಕಪಡಿಸಲು (ಎಫೆಸ 2:11).
2. ಯೆಹೋವನ ಒಡಂಬಡಿಕೆಯ ನೆನಪನ್ನು ನಿರಂತರವಾಗಿಡಲು (ಆ.ಕಾಂಡ 17:11).
3. ನೈತಿಕ ಪರಿಶುದ್ಧತೆಯನ್ನು ಹೊಂದಿಕೊಳ್ಳುವಂತೆ ಪೋಷಿಸಲು (ಧ.ಕಾಂಡ 10:16).
4. ನಂಬಿಕೆಯಿಂದ ಆಗುವ ನೀತಿಯನ್ನು ಪ್ರತಿಬಿಂಬಿಸಲು (ರೋಮ 4:11).
5. ಹೃದಯದಲ್ಲಿ ಆಗಬೇಕಾದ ಸುನ್ನತಿಯನ್ನು ಸಾಂಕೇತಿಕವಾಗಿ ಹೇಳಲು (ರೋಮ 2:29).
6. ಕ್ರೈಸ್ತೀಯ ಸಂಸ್ಕಾರ ಮತ್ತು ದೀಕ್ಷಾಸ್ನಾನ ಛಾಯೆಯಾಗಿಕೊಡಲಾಯ್ತು (ಕೊಲೊಸ್ಸೆ 2:11,12). ಎಸ್.ಡಿ.ಎ. ಸತ್ಯವೇದ ವ್ಯಾಖ್ಯಾನ 1ನೇ ಸಂಪುಟ ಪುಟ 322, 323.

ಮುಗಿಲುಬಿಲ್ಲು ದೇವರ ವಾಗ್ದಾನದ ಗುರುತಾಗಿ ಲೋಕವು ಅಂತ್ಯವಾಗುವವರೆಗೂ ಇರುತ್ತದೆ. ಆದರೆ ಸುನ್ನತಿಯು ಈವಾಗಲೇ ಇಲ್ಲವಾಗಿದೆ. ಪೌಲನು ಹೇಳುವ ಪ್ರಕಾರ ಅಬ್ರಹಾಮನು ದೇವರಲ್ಲಿ ನಂಬಿಕೆ ಇಟ್ಟ ಪ್ರಯುಕ್ತ ಸಿಕ್ಕಿದ ನೀತಿಗೆ ಗುರುತಾಗಿ ಸುನ್ನತಿಯ ಸಂಸ್ಕಾರವನ್ನು ಪಡೆದುಕೊಂಡನು (ರೋಮ 4:11). ಶತಶತಮಾನಗಳಿಂದಲೂ ರಕ್ಷಣೆಯು ಧರ್ಮಶಾಸ್ತ್ರಕ್ಕೆ ವಿಧೇಯರಾಗುವುದರಿಂದ ಸಿಗುತ್ತದೆ ಎಂಬುದನ್ನು ಸೂಚಿಸುವುದಕ್ಕಾಗಿ ಸುನ್ನತಿಯು ಆಚರಣೆಗೆ ಬಂತು. ಹೊಸಒಡಂಬಡಿಕೆ ಕಾಲದಲ್ಲಿ ಸುನ್ನತಿಯು ತನ್ನ ಮಹತ್ವವನ್ನು ಕಳೆದುಕೊಂಡಿತು. ಅದಕ್ಕೆ ಬದಲಾಗಿ ಕ್ರಿಸ್ತನಲ್ಲಿ ಇಡುವ ನಂಬಿಕೆಯು ಅವಶ್ಯಕವಾದ ಅಂಶವಾಯಿತು. ಅದು ವಿಶ್ವಾಸಿಯನ್ನು ಪರಿವರ್ತನೆಗೊಂಡ ವಿಧೇಯತ್ವದ ಜೀವನಕ್ಕೆ ನಡೆಸುತ್ತದೆ. ಗಲಾತ್ಯ 5:6, ಗಲಾತ್ಯ 6:15 ಮತ್ತು 1 ಕೊರಿಂಥ 7:18,19ನ್ನು ಓದಿರಿ.

# ಆರೋಗ್ಯದ ಲೇಖನಮಾಲೆ

## ನಾಲ್ಕನೇ ವಾರ

### * ತೀವ್ರವಾದ ಮಾನಸಿಕ ಖಿನ್ನತೆ

**ಮಾನಸಿಕ ಖಿನ್ನತೆ ಎಂದರೇನು?**

ಮೆದುಳಿನಲ್ಲಿ ಜೈವೀಕ ರಾಸಾಯನಿಕ ಅಸಮತೋಲನ ಉಂಟಾಗುವುದೆ ಮಾನಸಿಕ ಖಿನ್ನತೆ.

**ಗುರುತಿಸುವುದು ಹೇಗೆ?**

1. ಉದಾಸೀನತೆ ಕಂಡುಬರುವುದು, ಸಂತೋಷವಿರುವುದಿಲ್ಲ.
2. ಊಟದಲ್ಲಿ ಬದಲಾವಣೆ
3. ಚಟುವಟಿಕೆ ಮತ್ತು ನಿದ್ರಿಸುವುದರಲ್ಲಿ ಬದಲಾವಣೆ.
4. ಏನೋ ತಪ್ಪು ಮಾಡಿದ್ದೇನೆಂಬ ಭಾವನೆ ಹೆಚ್ಚಾಗುವುದು.
5. ಯಾವುದೇ ವಿಷಯದ ಬಗ್ಗೆ ಗಮನ ಕಡಿಮೆಯಾಗುವಿಕೆ.
6. ಆತ್ಮಹತ್ಯೆಯ ಯೋಚನೆ.

ಮೇಲೆ ತಿಳಿಸಿದ ಲಕ್ಷಣಗಳಲ್ಲಿ ಮೊದಲನೆ ಹಾಗೂ ಇನ್ನಿತರ ನಾಲ್ಕು ಕಾರಣಗಳು ಕಂಡುಬಂದಲ್ಲಿ ಅಂತಹ ವಕ್ತಿ ಮಾನಸಿಕ ಖಿನ್ನತೆಗೊಳಗಾಗಿದ್ದಾನೆಂದು ಹೇಳಬಹುದು.

**ಕಾರಣವೇನು?**

ಕುಟುಂಬದಲ್ಲಿನ ಬಿಕ್ಕಟ್ಟು, ವಾಸಿಯಾಗದ ಗಂಭೀರ ಕಾಯಿಲೆ, ಯಾವುದಾದರೂ ಕೆಟ್ಟ ಅನುಭವ, ನೈಸರ್ಗಿಕ ವಿಪತ್ತುಗಳುಂಟಾದಾಗ, ಜನರು ಭಾವನಾತ್ಮಕವಾದ ಆಘಾತಕ್ಕೊಳಗಾಗುತ್ತಾರೆ. ಆಗ ಮೆದುಳಿನಲ್ಲಿ ಕೆಲವು ರಾಸಾಯನಿಕ ಬದಲಾವಣೆಗಳು ಕಂಡುಬರುತ್ತವೆ. ಇದು ತೀವ್ರವಾದ ಮಾನಸಿಕ ಖಿನ್ನತೆಗೆ ಕಾರಣವಾಗುತ್ತದೆ.

**ಏನು ಮಾಡಬೇಕು?**

1. ದಿನಕ್ಕೆ 3 ಸಾರಿ 30 ನಿಮಿಷಗಳ ಕಾಲ ವೇಗವಾಗಿ ನಡೆಯಿರಿ.
2. ಏಕಾಂಗಿಯಾಗಿರದೆ, ಕುಟುಂಬ ಹಾಗೂ ಸ್ನೇಹಿತರೊಡನೆ ಸಮಯ ಕಳೆಯಬೇಕು.
3. ದೇವರಲ್ಲಿ ಪ್ರಾರ್ಥಿಸಿ, ಮಾನಸಿಕ ರೋಗ ತಜ್ಞರನ್ನು ಭೇಟಿ ಮಾಡಿ.

# ಮಾದಕ ವ್ಯಸನಕ್ಕೆ ದಾಸರಾಗುವುದು

**ಮಾದಕ ವ್ಯಸನದ ಚಟ ಎಂದರೇನು?**

ದುರಭ್ಯಾಸ, ದುಶ್ಚಟ, ಅದರಲ್ಲಿಯೂ ಮುಖ್ಯವಾಗಿ ಗಾಂಜಾ ಆಫೀಮು ಮೊದಲಾದ ಮಾದಕ ವಸ್ತುಗಳ ಅತಿ ಸೇವನೆಯ ಪರಿಣಾಮವಾಗಿ ಚಟವನ್ನು ಬಿಡಲಾರದ ಸ್ಥಿತಿ.

**ಗುರುತಿಸುವುದು ಹೇಗೆ?**

ಕುಟುಂಬದಲ್ಲಿ ಕಲಹ, ಗಂಡ ಹೆಂಡತಿ ನಡುವಣ ಮುರಿದ ಸಂಬಂಧ, ಮಕ್ಕಳು ತಂದೆ–ತಾಯಿಯರ ಮಾತು ಕೇಳದೆ ಅಡ್ಡದಾರಿ ಹಿಡಿದಾಗ, ಅದನ್ನು ಸರಿಪಡಿಸಲಾಗದೆ ಕೆಲವರು ನೋವು ಮರೆಯಲು ದುಶ್ಚಟಗಳಿಗೆ ಬಲಿಯಾಗುತ್ತಾರೆ. ಮದ್ಯಪಾನ, ಮಾದಕ ಪದಾರ್ಥ ಸೇವನೆ, ಅತಿಯಾದ ಲೈಂಗಿಕ ಚಟುವಟಿಕೆಯಲ್ಲಿ ತೊಡಗುತ್ತಾರೆ. ಟಿ.ವಿ. ಹೆಚ್ಚಾಗಿ ನೋಡುವುದು, 14–16 ಗಂಟೆಗಳ ಕಾಲ ಕೆಲಸದಲ್ಲಿ ತೊಡಗಿಸಿಕೊಳ್ಳುವುದೂ ಸಹ ಒಂದು ರೀತಿಯ ದುಶ್ಚಟವೇ ಆಗಿದೆ. ಇಂತಹ ವರ್ತನೆ ಒಬ್ಬ ವ್ಯಕ್ತಿಯಲ್ಲಿ ಪದೇ ಪದೇ ಕಂಡುಬಂದಾಗ, ಅವನು ಅದಕ್ಕೆ ದಾಸನಾಗುತ್ತಾನೆ. ಬೇಕೆಂದರೆ ಆ ದುರಭ್ಯಾಸವನ್ನು ಈಗಲೇ ಬಿಡಬಲ್ಲನೆಂದು ಅವನು ನೆನೆಸುತ್ತಾನೆ. ಆದರೆ ಅದು ಅಸಾಧ್ಯ.

**ಹೇಗೆ ಬರುತ್ತದೆ?**

ಮದ್ಯಪಾನ, ಧೂಮಪಾನ, ಮಾದಕ ಔಷಧ ಸೇವನೆ, ಕೆಲವು ರೀತಿಯ ಆಹಾರ, ಹೆಚ್ಚಾದ ಕಾಮುಕತನ ಅಥವಾ 14–16 ಗಂಟೆಗಳ ಕಾಲ ಕೆಲಸ ಮಾಡಿದಾಗ, ಅಂತವರ ಮೆದುಳಿನಲ್ಲಿ ಒಂದು ರೀತಿಯಲ್ಲಿ ರಾಸಾಯನಿಕ ಬಿಡುಗಡೆಯಾಗುತ್ತದೆ. ಇದು ಮನಸ್ಸಿಗೆ ಹಾನಿಯೆನಿಸುತ್ತದೆ.

**ಏನು ಮಾಡಬೇಕು?**

1. ತಾನು ದುಶ್ಚಟಕ್ಕೆ ದಾಸನಾಗಿದ್ದೇನೆಂದು ರೋಗಿ ಒಪ್ಪಿಕೊಳ್ಳಬೇಕು.
2. ದೇವರ ಬಗ್ಗೆ ಹೆಚ್ಚಾಗಿ ಚಿಂತಿಸಿ, ಪ್ರಾರ್ಥನೆ ಮಾಡಬೇಕು.
3. ದುಶ್ಚಟ ಬಿಡಿಸುವ ಅನೇಕ ಆರೋಗ್ಯ ಕೇಂದ್ರಗಳಿವೆ. ಅಲ್ಲಿಗೆ ಭೇಟಿ ನೀಡಿ ತಜ್ಞರ ಸಲಹೆ ಪಡೆದುಕೊಳ್ಳಬೇಕು.